ಅ) ಈ ಪ್ರವಾಸಿ ಮಂದಿರವನ್ನು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಟ್ರಸ್ಟ್‌ಗೆ ವಹಿಸಿಕೊಡುವಂತೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಹೌದು

ಆ) ಶ್ರೀ ಕ್ಷೇತ್ರ ರೇಣುಕಾ ಯಲ್ಲಮ್ಮ ದೇವಸ್ಥಾನ ಟ್ರಸ್ಟಿನಿಂದ ಸದರಿ ಯಾತ್ರಿಕಾ ಕಟ್ಟಡವನ್ನು ವಹಿಸಿಕೊಡುವಂತೆ ಪತ್ರವು ಇಲಾಖೆಗೆ ದಿನಾಂಕ:21–4–2004 ರಂದು ಬಂದಿರುತ್ತದೆ.

ಇ) ಸದರಿ ಘಟಕವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ 6–9–2003 ರಂದು ವಹಿಸಲಾಗಿತ್ತು. ನಿಗಮದವರು ಸರ್ಕಾರದ ನಿಯಮಾನುಸಾರ ಖಾಸಗಿ ಯವರಿಗೆ ವಹಿಸುವ ಪ್ರಕ್ರಿಯೆ ಈ ಘಟಕವನ್ನು ಇತರೆ 17 ಸೌಲಭ್ಯಗಳೊಂದಿಗೆ ಒಟ್ಟು 18 ಸೌಲಭ್ಯಗಳನ್ನು ಭಾರತ ಸರ್ಕಾರದ ಸಂಸ್ಥೆಯಾದ MRPL (Mangalore Refineries and Petro Chemicals Limited) ಇವರಿಗೆ 50 ವರ್ಷಗಳ ದೀರ್ಘಾವಧಿ ROMT (Renovate Operate Maintain and Transfer) ಆಧಾರದ ಮೇಲೆ ಕೆ.ಎಸ್.ಟಿ.ಡಿ.ಸಿ ಸಂಸ್ಥೆಯ ಮೂಲಕ ವಹಿಸಲಾಗಿರುತ್ತದೆ. ಆದರೆ ಸದರಿ ಸಂಸ್ಥೆಯವರು ಈ ಘಟಕವನ್ನು ಪ್ರಾರಂಭಿಸಲು ಕಾಲಾವಕಾಶ ಕೋರಿರುವುದರಿಂದ ಕಾರಣ ಕೇಳಿ ಸದರಿಯವರಿಗೆ ನೋಟೀಸನ್ನು ನೀಡಲಾಗಿದೆ. ಒಂದು ವೇಳೆ ಘಟಕವನ್ನು ಹಿಂದೆ ಪಡೆದಲ್ಲಿ ಶ್ರೀ ಕ್ಷೇತ್ರ ರೇಣುಕಾ ಯಲ್ಲಮ್ಮ ದೇವಸ್ಥಾನ ಟ್ರಸ್ಟಿಗೆ ಸದರಿ ಘಟಕವನ್ನು ವಹಿಸಲು ಪರಿಶೀಲಿಸಲಾಗುವುದು.

946 ಶ್ರೀ ಪಾಟೀಲ್ ಎಂ.ವೈ.: ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲ್ ಪುರ ಮತಕ್ಷೇತ್ರದಲ್ಲಿ ಬರುವ ದೇವಲ ಗಾಣಗಾಪುರ ಯಾತ್ರಾ ಸ್ಥಳದಲ್ಲಿ ಬುದ್ಧಿಮಾಂದ್ಯ ಹಾಗೂ ಅನಾಥ ಮಕ್ಕಳನ್ನು ಈ ಸ್ಥಳದಲ್ಲಿ ಬಿಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬುದ್ಧಿಮಾಂದ್ಯ ಹಾಗೂ ಅನಾಥ ಮಕ್ಕಳು ಬೀದಿಯಲ್ಲಿ ಭೀಕ್ಷೆ ಬೇಡುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬುದ್ಧಿಮಾಂದ್ಯ ಮತ್ತು ಅನಾಥ ವಯಸ್ಕ ಹೆಣ್ಣುಮಕ್ಕಳು ಅತ್ಯಾಚಾರಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಂತಹವರನ್ನು ಸಂರಕ್ಷಣೆ ಮಾಡುವ ಸಲುವಾಗಿ ಈ ಯಾತ್ರಾಸ್ಥಳದಲ್ಲಿ ಶಾಶ್ವತವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸರ್ಕಾರ

ಯೋಚಿಸಿದೆಯೇ; ಹಾಗಿದ್ದಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳೇನು; ಎಂದಿನಿಂದ ಹಮ್ಮಿಕೊಳ್ಳಲಾಗಿದೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಕೆಲವು ಭಕ್ತರು ತಮ್ಮ ಬುದ್ಧಿಮಾಂದ್ಯ ಮಕ್ಕಳನ್ನು ದರ್ಶನಕ್ಕೆ ಕರೆತಂದು ಸ್ಥಳದಲ್ಲಿ ಮಕ್ಕಳನ್ನು ಬಿಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು.

ಇ) ಇಲ್ಲಿಯವರೆವಿಗೆ ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಈ) ಹೌದು. ಇಂತಹವರನ್ನು ಸಂರಕ್ಷಣೆ ಮಾಡುವ ಸಲುವಾಗಿ ಯಾತ್ರಾ ಸ್ಥಳದಿಂದ ದಿನಾಂಕ:16–9–2006 ರಂದು 12 ಜನ ಬುದ್ಧಿಮಾಂದ್ಯ ಹೆಣ್ಣು ಮಕ್ಕಳನ್ನು ದೇವಸ್ಥಾನದಿಂದ ಕರೆದುಕೊಂಡು ಗುಲ್ಬರ್ಗಾದಲ್ಲಿರುವ ಮಾನಸಗಂಗಾ ಬುದ್ಧಿಮಾಂದ್ಯ ಕುಟೀರಕ್ಕೆ ದಾಖಲು ಮಾಡಿ ಅವರಿಗೆ ಊಟ, ವಸತಿ ಮತ್ತು ಅವಶ್ಯಕ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ಬುದ್ಧಿ ಮಾಂದ್ಯ ಮಕ್ಕಳಿಗೆ ಗುಲ್ಬರ್ಗಾದಲ್ಲಿ ಒಂದು ವಸತಿನಿಲಯ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

638 ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿನ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಟ್ಟಡ:ರಸ್ತೆ;ಸೇತುವೆ ಕಾಮಗಾರಿಗಳ ವಿವರದ " Appendix-E" ಅನ್ನು ಸರ್ಕಾರ ಯಾವ ತಿಂಗಳಿನಲ್ಲಿ ಅನುಮೋದಿಸಿದೆ ;

ಆ) ಈ ಅನುಮೋದಿಸಿದ ಕಾಮಗಾರಿಗಳ ಪೈಕಿ ಎಷ್ಟಕ್ಕೆ ಅಂದಾಜುಪತ್ರಿಕೆ ತಯಾರಿಸಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ;

ಇ) ಇವುಗಳ ಪೈಕಿ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳು ಪ್ರಾರಂಭವಾಗಿವೆ;

ಈ) ಇಲಾಖಾವಾರು ಕಾಮಗಾರಿಗಳ ಪೈಕಿ ಯಾವ ಯಾವ ಇಲಾಖೆಗಳ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬಾಕಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?